ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ. ಡಿಟಿಇ/05/ಎಲ್ಆರ್‌ಡಿಸಿ/2017-18 | 278

ನಿರ್ದೇಶಕರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 02-05-2018.

**ಸುತ್ತೋಲೆ**

ವಿಷಯ: ಆನ್ ಲೈನ್ ಇಂಟ್ರಾಕ್ಟಿವ್ ತರಗತಿಗಳನ್ನು ನಡೆಸುವ ಬಗ್ಗೆ.

* * * * *

ತಾಂತ್ರಿಕ ಶಿಕ್ಷಣವನ್ನು ರಾಜ್ಯದ ನಗರ ಹಾಗೂ ಗ್ರಾಮೀಣ ಪ್ರದೇಶದ ಎಲ್ಲಾ ವಿದ್ಯಾರ್ಥಿಗಳಿಗೆ ಭೋದಿಸಿ, ಹಾಗೂ ಔದ್ಯೋಗಿಕ ಅವಕಾಶಗಳನ್ನು ಕಲ್ಪಿಸುವ ದೃಷ್ಠಿಯಿಂದ ರಾಜ್ಯದ ಎಲ್ಲಾ ಸರ್ಕಾರಿ/ಸರ್ಕಾರಿ ಅನುದಾನಿತ ಮತ್ತು ಅನುದಾನರಹಿತ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಆನ್ ಲೈನ್ ಇಂಟ್ರಾಕ್ಟಿವ್ ಮುಖಾಂತರ ಪ್ರಸಾರ ಮಾಡುವ ಕಾರ್ಯಕ್ರಮವನ್ನು ವೀಕ್ಷಿಸಲು ಅನುಕೂಲವಾಗುವಂತೆ ದಿನಾಂಕ:07.08.2017 ರಿಂದ ಆನ್ ಲೈನ್ ಇಂಟ್ರಾಕ್ಟಿವ್ ಮುಖಾಂತರ ವಿಷಯ ಪರಿಣಿತರು ಭೋದಿಸುವ ಕಾರ್ಯಕ್ರಮಗಳನ್ನು ನೇರ ಪ್ರಸಾರ ಮಾಡಲು ಪ್ರಾರಂಭಿಸಲಾಯಿತು. ದಿನಾಂಕ:07.08.2017 ರಿಂದ ಇಲ್ಲಿಯವರೆಗೂ ನುರಿತ ವಿಷಯ ಪರಿಣಿತರಿಂದ ಹಲವಾರು ವಿಷಯಗಳನ್ನು ಆನ್ ಲೈನ್ ಇಂಟ್ರಾಕ್ಟಿವ್ ಮುಖಾಂತರ ಭೋದಿಸಿದ ಕಾರ್ಯಕ್ರಮಗಳನ್ನು ನೇರ ಪ್ರಸಾರಮಾಡಲಾಯಿತು, ಸದರಿ ಕಾರ್ಯಕ್ರಮದಿಂದ ಗ್ರಾಮಾಂತರ ಪ್ರದೇಶ ಹಾಗೂ ದೂರಪ್ರದೇಶದಲ್ಲಿರುವ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಅನುಕೂಲವಾಗಿರುತ್ತದೆ. ಸದರಿ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳು ತಮ್ಮ ಸಂಸ್ಥೆಯ ಉಪನ್ಯಾಸಕರೊಂದಿಗೆ ಚರ್ಚಿಸಿ ಯಾವ ಯಾವ ವಿಷಯಗಳನ್ನು ಆನ್ ಲೈನ್ ಇಂಟ್ರಾಕ್ಟಿವ್ ಮುಖಾಂತರ ಭೋದಿಸಬೇಕು ಎಂಬುದರ ಬಗ್ಗೆ https://goo.gl/forms/LoIrzNEAJzTH0D0V2 ರಲ್ಲಿ ಕೋರಿರುವ ಮಾಹಿತಿಯನ್ನು ದಿನಾಂಕ:15.05.2018 ರೊಳಗಾಗಿ ನೀಡವುದು.

ಮುಂದುವರಿದು ಆನ್ ಲೈನ್ ಇಂಟ್ರಾಕ್ಟಿವ್ ಮುಖಾಂತರ ಪ್ರಸಾರ ಮಾಡುವ ಕಾರ್ಯಕ್ರಮದಲ್ಲಿ ಭೋದಿಸಲು ಇಚ್ಛಿಸುವ ವಿಷಯ ಪರಿಣಿತರು(ಉಪನ್ಯಾಸಕರುಗಳು) https://goo.gl/forms/OweBwXWx0AHwZBim2 ರಲ್ಲಿ ಕೋರಿರುವ ತಮ್ಮ ವೈಯಕ್ತಿಕ ಮಾಹಿತಿಯನ್ನು ದಿನಾಂಕ:15.05.2018 ರೊಳಗಾಗಿ ನೀಡವುದು.

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:

1. ಎಲ್ಲಾ ಸರ್ಕಾರಿ/ಸರ್ಕಾರಿ ಅನುದಾನಿತ ಮತ್ತು ಅನುದಾರಹಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ ಮತ್ತು ಎಲ್ಲಾ ಉಪನ್ಯಾಸಕರುಗಳಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.

ಪ್ರತಿ: 1. ಇ.ಆಡಳಿತ ವಿಭಾಗಕ್ಕೆ ಇಲಾಖಾ ವೆಬ್ ಸೈಟ್ ನಲ್ಲಿ ಪ್ರಚುರಪಡಿಸುವುದು.